ಸೆಲೆಬ್ರಿಟಿ ■ ಹನಿ

# ಜೆಫ್: ನೌಕರರ ಕಣ್ಮಣಿ!

ನೌಕರಿ ಕಡಿತ ವಿಶ್ವದ ಎಲ್ಲೆಡೆ ಕಾಣಿಸುತ್ತಿರುವ ವಿದ್ಯಮಾನ. 2017 ನೌಕರಿಗೆ ಸಂಬಂಧಿಸಿ 'ಅತ್ಯಂತ ಕೆಟ್ಟ ವರ್ಷ' ಎಂದು ಕರೆಸಿಕೊಳ್ಳುವ ಸಾಧ್ಯತೆಯೇ ಹೆಚ್ಚಿದೆ. ಮೈಕ್ರೊಸಾಫ್ಟ್, ಆ್ಯಪಲ್, ಅಲ್ಫಾಬೆಟ್ (ಗೂಗಲ್‌ನ ಮಾತೃಸಂಸ್ಥೆ), ಇನ್‌ಫೋಸಿಸ್ ಎಲ್ಲವೂ ನೌಕರಿ ಕಡಿತದ ಘೋಷಣೆಗಳನ್ನು ಪ್ರತಿ ತಿಂಗಳೂ ಎಂಬಂತೆ ಹೊರಡಿಸುತ್ತಿವೆ. ಇದನ್ನು ಬರೆಯುವ ಹೊತ್ತಿಗೆ, ಮೈಕ್ರೊಸಾಫ್ಟ್‌ನ ಸಿಇಒ ಸತ್ಯಾ ನಾಡೆಲ್ಲ, 'ನಮ್ಮ ಕಂಪೆನಿಯ ಮಾರಾಟ ವಿಭಾಗದಲ್ಲಿ ಶೇಕಡಾ 10ರಷ್ಟು ಉದ್ಯೋಗಿಗಳಿಗೆ ಪಿಂಕ್‌ಸ್ಲಿಪ್ ಕೊಡುತ್ತಿದ್ದೇವೆ, 4000 ನೌಕಕರು ಮನೆಗೆ ಹೋಗಲಿದ್ದಾರೆ' ಎಂದು ಪ್ರಕಟಿಸಿದ್ದಾರೆ. ಎಲ್ಲೆಡೆ ನೌಕರಿ ಕಡಿತ ಡೆಂಗ್ಯೂ ಜ್ವರದಂತೆ ಹಬ್ಬಿದೆ. ಆದರೆ ಅಮೆಜಾನ್.ಕಾಮ್ ಮಾತ್ರ ಇದಕ್ಕೆ ತದ್ವಿರುದ್ಧ! 'ಮುಂದಿನ 18 ತಿಂಗಳೊಳಗೆ ಇನ್ನೂ ಒಂದು ಲಕ್ಷ ಜನರಿಗೆ ನಮ್ಮ ಕಂಪೆನಿ ಪೂರ್ಣಾವಧಿ ನೌಕರಿಯನ್ನು ನೀಡಲಿದೆ' ಎಂದು ಅಮೆಜಾನ್ ಘೋಷಿಸಿದೆ!

ಅಮೆಜಾನ್ ಕಂಪೆನಿಯ ಸಿಇಒ ಮತ್ತು ಚೇರ್‌ಮನ್ ಜೆಫ್ ಬಿಜೋಸ್ ಈಗ ವಾಣಿಜ್ಯಲೋಕದ ಕಣ್ಮಣಿ. ಕೇವಲ 614 ನೌಕರರಿದ್ದ ಕಂಪೆನಿಯನ್ನು, ಒಂದೇ ವರ್ಷದೊಳಗೆ 2.30 ಲಕ್ಷ ನೌಕರರ ಕಂಪೆನಿಯನ್ನಾಗಿ ಜಗದ್ವಿಖ್ಯಾತಗೊಳಿಸಿದ 'ಪವಾಡ' ಪುರುಷ! ಈಗ ಇನ್ನೂ ಒಂದು ಲಕ್ಷ ಜನರಿಗೆ ಕೆಲಸ ಕೊಡುತ್ತಿದ್ದೇನೆ ಎನ್ನುತ್ತಿದ್ದಾರೆ. ಅದಕ್ಕೂ ಕಾರಣವಿದೆ. ಇಡೀ ಜಗತ್ತಿನ ವಾಣಿಜ್ಯ ವಹಿವಾಟಿನ ಸ್ವರೂಪವನ್ನೇ ಬದಲಿಸಿದ ಇ–ಕಾಮರ್ಸ್, ಯಾವ ಆರ್ಥಿಕ ಹಿಂಜರಿಕೆಯನ್ನೂ ಲೆಕ್ಕಿಸದೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ. ಜಾಗತಿಕ ಸ್ಮಾರ್ಟ್‌ಫೋನ್ ಮಾರುಕಟ್ಟೆ ಬೆಳೆದಂತೆಲ್ಲಾ ಇ–ಕಾಮರ್ಸ್ ಅಷ್ಟದಿಕ್ಕುಗಳಲ್ಲೂ ಪಸರಿಸುತ್ತಿದೆ. ಇ ಕಾಮರ್ಸ್‌ನ ಅಗಾಧ ಸಾಧ್ಯತೆಗಳನ್ನು ಎಲ್ಲರಿಗಿಂತ ಮುಂಚೆ ಊಹಿಸಿದ ಜೆಫ್ ಬಿಜೋಸ್, ತನ್ನ ಕಂಪೆನಿಯ ದೈತ್ಯ ಹೆಜ್ಜೆಗಳನ್ನು ಎಷ್ಟೊಂದು ಗಟ್ಟಿಯಾಗಿ ಊರಿದ್ದಾರೆಂದರೆ, ಇನ್ನೊಂದು ಕಂಪೆನಿ ಅವರ ವಹಿವಾಟನ್ನು ಕಿತ್ತುಕೊಳ್ಳುವುದು ಸಾಧ್ಯವೇ ಇಲ್ಲ ಎನ್ನುವಂತಹ ವಾತಾವರಣ ನಿರ್ಮಾಣವಾಗಿದೆ. ಅಮೆಜಾನ್‌ಗೆ ಹತ್ತಿರದ ಪ್ರತಿಸ್ಪರ್ಧಿಯೇ ಇಲ್ಲ. ಹಾಗೆಂದು ಅಂದುಕೊಳ್ಳುತ್ತಿದ್ದ ಬ್ರಿಟನ್ನಿನ ಅತಿದೊಡ್ಡ ಚಿಲ್ಲರೆ ಮಾರಾಟ ಕಂಪೆನಿ ಟೆಸ್ಕೊ ಕಂಪೆನಿಯ ಷೇರು ಮಾರುಕಟ್ಟೆಯ 30 ಪಟ್ಟು ಹೆಚ್ಚು ಷೇರು ಮಾರುಕಟ್ಟೆ ಮೌಲ್ಯವನ್ನು ಅಮೆಜಾನ್ ಕಂಪೆನಿ ಹೊಂದಿದೆ!

1994ರಲ್ಲಿ ಮನೆಯ ಪುಟ್ಟ ಗ್ಯಾರೇಜ್‌ನಲ್ಲಿ ಪುಸ್ತಕಗಳನ್ನು ಇಟ್ಟುಕೊಂಡು ಆನ್‌ಲೈನ್ ಮಾರಾಟದ ಕಂಪೆನಿಯನ್ನು ಹುಟ್ಟು ಹಾಕಿದಾತ ಈ ಜೆಫ್ ಬಿಜೋಸ್. ಈ 23 ವರ್ಷಗಳ ಓಟ ಇಡೀ ಜಗತ್ತಿನ ವಾಣಿಜ್ಯ ಕಂಪೆನಿಗಳ ಕಣ್ಣು ತೆರೆಸಿದೆ. ಇವತ್ತು ಅಮೆರಿಕದ ಒಟ್ಟು ಆನ್‌ಲೈನ್ ವಹಿವಾಟಿನಲ್ಲಿ ಶೇಕಡಾ 43ರಷ್ಟು ಪಾಲು ಅಮೆಜಾನ್‌ನದ್ದು. 2017 ರಲ್ಲಿ ಅಮೆಜಾನ್‌ನ ಷೇರು ದರ ದಾಖಲೆ ಶೇಕಡಾ 33ರಷ್ಟು ಏರಿಕೆ ಕಂಡಿದೆ. ಜಗತ್ತಿನ ಮೂವರು ಅತ್ಯಂತ ದೊಡ್ಡ ಶ್ರೀಮಂತರ ಪಟ್ಟಿಯಲ್ಲಿ ಈಗ ಬಿಜೋಸ್ ಹೆಸರಿದೆ. ಅಮೆಜಾನ್ ಷೇರುಪೇಟೆಯ ಓಟ ಹೀಗೆಯೇ ಮುಂದುವರಿದರೆ ಜಗತ್ತಿನ 'ನಂಬರ್ ಒನ್ ಶ್ರೀಮಂತ' ಬಿಲ್ ಗೇಟ್ಸ್‌ರನ್ನೂ ಈತ ಹಿಂದಿಕ್ಕುವ ಸಮಯ ದೂರವಿಲ್ಲ. ಕಳೆದ ಐದು ತಿಂಗಳಲ್ಲಿ ಬಿಜೋಸ್ ನಿವ್ವಳ ಆಸ್ತಿ ಮೊತ್ತ 20 ಶತಕೋಟಿ ಡಾಲರ್‌ನಷ್ಟು ಏರಿಕೆ ಕಂಡಿದ್ದು, ಒಟ್ಟು ನಿವ್ವಳ ಆಸ್ತಿ ಮೊತ್ತ 85.2 ಶತಕೋಟಿ ಡಾಲರ್‌ಗೆ ತಲುಪಿದೆ. ಬಿಲ್ ಗೇಟ್ಸ್‌ರದ್ದು 89.3 ಶತಕೋಟಿ ಡಾಲರ್. ಹೆಚ್ಚೇನೂ ಅಂತರವಿಲ್ಲ. ಅಮೆಜಾನ್ ಕಂಪೆನಿಯ ಒಟ್ಟು ಮೌಲ್ಯ 475 ಶತಕೋಟಿ ಡಾಲರ್ ತಲುಪಿದೆ.

1997ರಲ್ಲಿ ಅಮೆಜಾನ್ ಕಂಪೆನಿ ಷೇರು ಮಾರುಕಟ್ಟೆಯನ್ನು ಪ್ರವೇಶಿಸುವಾಗ ಜೆಫ್ ಬಿಜೋಸ್ ತಮ್ಮ ನೌಕರರಿಗೆ ಒಂದು ಪತ್ರ ಬರೆದಿದ್ದರು. ಅದರಲ್ಲಿ ನೌಕರರಿಗೆ ಕೆಲಸಕ್ಕೆ ಸಂಬಂಧಿಸಿ ಐದು ಸೂತ್ರಗಳನ್ನು ಮುಂದಿಟ್ಟಿದ್ದಾರೆ. 'ಕೆಲಸದ ಸಂಸ್ಕೃತಿಯೊಂದನ್ನು ರೂಪಿಸಿಕೊಳ್ಳಿ; ರಿಸ್ಕ್ ತಗೊಳ್ಳಿ; ದೀರ್ಘಾವಧಿ ಮಾರುಕಟ್ಟೆ ಬಗ್ಗೆ ಚಿಂತಿಸಿ; ಸ್ಪರ್ಧಿಗಳ ಕಡೆಗೆ ಗಮನ ಕೊಡುವ ಬದಲು ಗ್ರಾಹಕರನ್ನು ಕೇಳಿ ಮತ್ತು ನೌಕರರು ಕಂಪೆನಿಯ ಮಾಲೀಕರ ತರಹ ಯೋಚಿಸಿ'– ಇವೇ ಆ ಐದು ಸೂತ್ರಗಳು ! ಇದೇ ಪತ್ರವನ್ನು ಬಿಜೋಸ್ ಪ್ರತಿ ವರ್ಷ ತಮ್ಮ ನೌಕರರಿಗೆ ಮರುಮುದ್ರಣ ಮಾಡಿ ಕಳುಹಿಸುತ್ತಿದ್ದಾರೆ!

ಅಮೆರಿಕದ ಸೀಟಲ್‌ನಲ್ಲಿ ಇರುವ ಕಂಪೆನಿಯ ಹೆಡ್ ಕ್ವಾರ್ಟರ್ಸ್‌ನಲ್ಲಿ ತಮ್ಮ ಕಚೇರಿಗೆ ಬಿಜೋಸ್ ಇಟ್ಟಿರುವ ಹೆಸರು 'ಡೇ ಒನ್' ಅಂದರೆ ಮೊದಲ ದಿನ! ಪ್ರತಿಯೊಬ್ಬ ನೌಕರನಿಗೂ ಅವರು ಹೇಳುವ ಕಿವಿಮಾತು ಇಷ್ಟೆ– ಪ್ರತಿದಿನವೂ ಕಚೇರಿಯಲ್ಲಿ ಮೊದಲ ದಿನ ಎಂದೇ ತಿಳಿದುಕೊಂಡು ಕೆಲಸ ಮಾಡಿ! ಅವರ ಪ್ರಕಾರ, ಎರಡನೇ ದಿನ ಎನ್ನುವುದು ವ್ಯಾಪಾರವನ್ನು ಪ್ರಪಾತಕ್ಕೆ ತಳ್ಳಬಹುದು ಅಥವಾ ಏನಾದರೂ ಆಗಬಹುದು. ಮೊದಲ ದಿನ ಎಷ್ಟು ಶ್ರದ್ಧೆಯಿಂದ ಕೆಲಸ ಮಾಡಿದ್ದೀರೋ, ಪ್ರತಿದಿನವೂ ಅಷ್ಟೇ ಶ್ರದ್ಧೆಯಿಂದ ಕೆಲಸ ಮಾಡಿದರೆ ವ್ಯಾಪಾರ ಕುಸಿಯುವುದಿಲ್ಲ.

53ರ ಹರೆಯದ ಬಿಜೋಸ್, ಮೈಕ್ರೊಸಾಫ್ಟ್‌ನ ಮಾಲೀಕ ಬಿಲ್ ಗೇಟ್ಸ್ ಗೆ ಶ್ರೀಮಂತಿಕೆಯಲ್ಲಿ ಪೈಪೋಟಿ ನೀಡುತ್ತಿದ್ದರೂ, ದಾನಧರ್ಮದ ವಿಷಯದಲ್ಲಿ ನೀಡುತ್ತಿಲ್ಲ. ಬಿಲ್ ಗೇಟ್ಸ್ ಮತ್ತು ವಾರೆನ್ ಬಫೆಟ್ ರಂತೆ ಬಿಜೋಸ್ ತಮ್ಮ ಶ್ರೀಮಂತಿಕೆಯ ಬಹುಭಾಗವನ್ನು ದಾನ ಮಾಡುವ 'ಗಿವಿಂಗ್ ಪ್ಲೆಡ್ಜ್' ಪಟ್ಟಿಗೆ ಸಹಿ ಹಾಕಿಲ್ಲ. ಆದರೆ ದಾನ ಧರ್ಮಗಳಲ್ಲಿ ಹಿಂದೆಯೂ ಬಿದ್ದಿಲ್ಲ. 2012ರಲ್ಲಿ ಸಲಿಂಗ ವಿವಾಹಿತರಿಗೆಂದೇ 25 ಲಕ್ಷ ಡಾಲರ್ ದತ್ತಿ ಬರೆದಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ರನ್ನು ಚುನಾವಣೆಯ ದಿನಗಳಿಂದಲೂ ವಿರೋಧಿಸುತ್ತಿರುವ ಜೆಫ್ ಬಿಜೋಸ್, ಈಗಲೂ ಟ್ರಂಪ್ ಸರಕಾರದ ವಹಿವಾಟು ನೀತಿಗಳ ಕಟ್ಟಾ ವಿರೋಧಿ. ಆದರೆ ಸದ್ಯದ ಮಟ್ಟಿಗೆ ಈತ ನೌಕರರ ಡಾರ್ಲಿಂಗ್! ■



Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65